ಡಾ|| ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು, ಈ ಆಸ್ಪತ್ರೆಗೆ ಕೇವಲ2 ನೇರ ಸಂಪರ್ಕಗಳಿದ್ದು1 ಸಂಪರ್ಕ ರಸ್ತೆಯು ರಾಷ್ಟ್ರೀಯ ಮಾನಸಿಕ ನರ ವಿಜ್ಞಾನ ಸಂಸ್ಥೆಯ ಮೂಲಕವಾಗಿ ಮತ್ತೊಂದು ರಸ್ತೆ ಪಶ್ಚಿಮ ಭಾಗಕ್ಕೆ 80 ಅಡಿ ರಸ್ತೆಗೆ ಸಂಪರ್ಕವಿರುತ್ತದೆ. ರಾಷ್ಟ್ರೀಯ ಮಾನಸಿಕ ಮತ್ತು ನರ ವಿಜ್ಞಾನ ಸಂಸ್ಥೆಯ ಪ್ರಾಧಿಕಾರವು ಈ ಆಸ್ಪತ್ರೆಯ ವಾಹನಗಳನ್ನು ಹಾದು ಹೋಗಲು ಅನುಮತಿ ನೀಡಲು ನಿರಾಕರಿಸಿರುತ್ತಾರೆ. ಮತ್ತೊಂದು 30 ಅಡಿ ರಸ್ತೆಯು ನೇರವಾಗಿದ್ದು ಅಂಬ್ಯುಲೆನ್ಸ್ ವಾಹನಗಳನ್ನು ಶೀಘ್ರವಾಗಿ ತಿರುವಲು ಮತ್ತು ನಡೆಸಲು ಅನಾನುಕೂಲವಾಗಿರುತ್ತದೆ.

ಆ) ಈ ಸಂಜಯ್‌ಗಾಂಧಿ ಅಪಘಾತ ಆಸ್ಪತ್ರೆಗೆ ಹೋಗುವ ರಸ್ತೆಯನ್ನು ಸರಿಪಡಿಸಲು ಸರ್ಕಾರವು ಕ್ರಮಕೈಗೊಳ್ಳುತ್ತಿದೆ.

ಕೊಳಚೆ ಪ್ರದೇಶದಿಂದ ರೋಗಿಗಳಿಗೆ ತೊಂದರೆ.

1602 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಎನ್‌ಡಿಎಸ್ ಸ್ಯಾನಿಟೋರಿಯಂನ ಆವರಣದ ಮಧ್ಯದಲ್ಲಿ ಒಂದು ಕೊಳಚೆ ಪ್ರದೇಶ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ?

ಇ) ಈ ಸ್ಲಂನ್ನು ಬೇರೆ ಕಡೆಗೆ ಸ್ಥಳಾಂತರಿಸಲು ಸರ್ಕಾರದ ಕೈಗೊಳ್ಳಲಿರುವ ಕ್ರಮಗಳೇನು?

ಡಾ|| ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

ಇ) ಈ ಸ್ಲಂನ್ನು ಸ್ಥಳಾಂತರಿಸಲು ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಹಾಗೂ ಬೆಂಗಳೂರು ಉತ್ತರ ತಾಲ್ಲೂಕಿನ ತಹಸೀಲ್ದಾರರೊಂದಿಗೆ ವ್ಯವಹರಿಸಲಾಗುತ್ತಿದೆ. ಹಾಗೂ ಅವರಿಗೆ ಸೂಕ್ತ ಸ್ಥಳದಲ್ಲಿ ಪುನರ್ವಸತಿ ಕಲ್ಪಿಸಲು ಸೂಚಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಂಪೇಗೌಡ ಅಧ್ಯಯನ ಪೀಠ ಸ್ಥಾಪನೆ.

1603 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕೆಂಪೇಗೌಡರ ಪೀಠವನ್ನು ಸ್ಥಾಪಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿಲ್ಲದಿದ್ದಲ್ಲಿ, ಸರ್ಕಾರ ಈ ಪೀಠವನ್ನು ಸ್ಥಾಪಿಸಲು ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಸದ್ಯಕ್ಕೆ ಸ್ಥಾಪಿಸಲು ಸಾಧ್ಯವಿಲ್ಲ.

ಬೆಂಗಳೂರು ನಗರದಲ್ಲಿ ಹೊಸ ಗ್ರಂಥಾಲಯಗಳ ಪ್ರಾರಂಭ.

1604 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ 1998-99ರಲ್ಲಿ ಎಲ್ಲೆಲ್ಲಿ ಹೊಸದಾಗಿ ಗ್ರಂಥಾಲಯಗಳನ್ನು ತೆರೆಯಲಾಗುವುದು?

ಆ) ಇವುಗಳಲ್ಲಿ ಅತ್ಯಾಧುನಿಕ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಲಾಗುವುದೇ?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ 1998-99ನೇ ಸಾಲಿನಲ್ಲಿ ಈ ಕೆಳಕಂಡ 15 ಸ್ಥಳಗಳಲ್ಲಿ ಹೊಸದಾಗಿ ಶಾಖಾ ಗ್ರಂಥಾಲಯಗಳನ್ನು ತೆರೆಯಲು ಉದ್ದೇಶಿಸಿದೆ.

1. ಜೆ.ಪಿ.ನಗರ, ವಾರ್ಡ್ ನಂ. 57
2. ಬಿ.ಟಿ.ಎಂ. ಲೇಔಟ್, ವಾರ್ಡ್ ನಂ. 60
3. ಪದ್ಮನಾಭನಗರ, ವಾರ್ಡ್ ನಂ. 55
4. ಮಡಿವಾಳ, ವಾರ್ಡ್ ನಂ. 66
5. ಫ್ಲವರ್ ಗಾರ್ಡನ್, ವಾರ್ಡ್ ನಂ. 30
6) ಪೀಣ್ಯ, ವಾರ್ಡ್ ನಂ. 11
7. ಮತ್ತಿಕೆರೆ, ವಾರ್ಡ್ ನಂ.2
8. ಬೌರಿಂಗ್ ಆಸ್ಪತ್ರೆ, ವಾರ್ಡ್ ನಂ. 79
9. ಕಾರ್ಪೊರೇಷನ್ ನೂತನ ಕಟ್ಟಡ, ವಾರ್ಡ್ ನಂ. 77
10. ಸಿಟಿ ಮಾರ್ಕೆಟ್ ಹೊಸ ಕಟ್ಟಡ, ವಾರ್ಡ್ ನಂ. 36
11. ಗಾಂಧಿನಗರ, ವಾರ್ಡ್ ನಂ. 27
12. ಹೈಗೌಂಡ್ಸ್
13. ಕನ್ನಿಂಗ್ ಹ್ಯಾಂ ರೋಡ್, ವಾರ್ಡ್ ನಂ. 78
14. ಈಜಿಪುರ
15. ಗಂಗಾನಗರ, ವಾರ್ಡ್ ನಂ. 98

ಆ) ಈ ಗ್ರಂಥಾಲಯಗಳಲ್ಲಿ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.